International Journal of Kannada Research
www.kannadajournal.com

ISSN: 2454–5813
IJKR 2022; 8(3): 65-66
© 2022 IJKR
www.kannadajournal.com
Received: 01-05-2022
Accepted: 05-06-2022

**ಮಲ್ಲಿನಾಥ ಶಿವಲಿಂಗಪ್ಪ ನಿಂಬರ್ಗಿ**
ಸಂಶೋಧನಾ ವಿದ್ಯಾರ್ಥಿ, ಕನ್ನಡ ಅಧ್ಯಯನ ಸಂಸ್ಥೆ, ಗುಲಬರ್ಗಾ ವಿಶ್ವ ವಿದ್ಯಾಲಯ ಕಲಬುರಗಿ, ಕರ್ನಾಟಕ, ಭಾರತ

Corresponding Author:
**ಮಲ್ಲಿನಾಥ ಶಿವಲಿಂಗಪ್ಪ ನಿಂಬರ್ಗಿ**
ಸಂಶೋಧನಾ ವಿದ್ಯಾರ್ಥಿ, ಕನ್ನಡ ಅಧ್ಯಯನ ಸಂಸ್ಥೆ, ಗುಲಬರ್ಗಾ ವಿಶ್ವ ವಿದ್ಯಾಲಯ ಕಲಬುರಗಿ, ಕರ್ನಾಟಕ, ಭಾರತ

# ಬಂಡಾಯದ ಧ್ವನಿ ಡಾ. ಎಚ್. ಎಸ್. ಅನುಪಮಾ

**ಮಲ್ಲಿನಾಥ ಶಿವಲಿಂಗಪ್ಪ ನಿಂಬರ್ಗಿ**

ಅಂದು ಸಾವಿತ್ರಿಬಾಯಿ ಫುಲೆ ಯವರು ಮಹಿಳಾ ಶಿಕ್ಷಣ ಎನ್ನುವುದು ದುರದ ಕನಸಿನ ಮಾತಾಗಿದ್ದ ಹೊತ್ತಿನಲ್ಲಿ, ಬಾಲ್ಯ ವಿವಾಹ ಉತ್ತುಂಗದಲ್ಲಿದ್ದ ಕಾಲದಲ್ಲಿ ಬಾಲಕಿಯರ ಶಾಲೆ ತೆರೆದು ಸಮಾನತೆಯ ಹೆಜ್ಜೆ ಇಡುವುದನ್ನು ಕಲಿಸಿದರು. ಶೋಷಿತರ ವಿಮೋಚನೆಯ ದಾರಿಗಳ ಹುಡುಕುತ್ತ ಶಿಕ್ಷಣ, ಸಂಘಟನೆ, ಹೋರಾಟಗಳನ್ನು ಪ್ರತಿಪಾಸಿದ್ದು ಸಾಮಾನ್ಯ ಮಹಿಳೆಯ ಅಸಾಧಾರಣ ದಿಟ್ಟತನ, ಬದ್ಧತೆ, ಕಷ್ಟಸಹಿಷ್ಣುತೆಗಳನ್ನು ಪ್ರದರ್ಶನ ಭಾರತೀಯ ಮಹಿಳಾ ವಿಮೋಚನೆಯ ಮೈಲುಗಲ್ಲಾದರು. ಸಮಾಜದಲ್ಲಿನ ಸಮಾನತೆಗಾಗಿ ಹೋರಾಡಿದ ಗೌತಮ ಬುದ್ಧ, ಬಸವಣ್ಣಾ, ಜ್ಯೋತಿಬಾ ಫುಲೆ, ಶಾಹು ಮಹಾರಾಜ, ಡಾ. ಅಂಬೇಡ್ಕರ್, ಮಹಾತ್ಮ ಗಾಂಧಿ, ಅಕ್ಕ ಮಹಾದೇವಿ, ಸಾವಿತ್ರಿ ಬಾಯಿ ಫುಲೆ, ಕಸ್ತೂರ ಬಾ ಅವರ ತತ್ವ ಚಿಂತನೆಗಳ ಗಾಢವಾದ ಪ್ರಭಾವ ಹಾಗೂ ಕನ್ನಡ ಸಾಹಿತಿಗಳ,ಹೋರಾಟಗಾರರ, ಮಹಿಳಾ ಸಂಘಟನೆಗಳ ಒಡನಾಡಿಯಾಗಿ ವೈಚಾರಿಕವಾಗಿ ಬೆಳೆದ ಕನ್ನಡ ಖ್ಯಾತ ಲೇಖಕರಲ್ಲಿ ಡಾ. ಎಚ್. ಎಸ್. ಅನುಪಮಾ ಅವರು ಒಬ್ಬರು.

ಕನ್ನಡ ಸಾಹಿತ್ಯ ಬರಹಗಾರರಲ್ಲಿ ಡಾ. ಎಚ್. ಎಸ್. ಅನುಪಮಾ ಅವರು ವೃತ್ತಿಯಲ್ಲಿ ವೈದ್ಯೆರಾಗಿ ಪ್ರವೃತ್ತಿಯಲ್ಲಿ ಸಾಹಿತಿಯಾಗಿ ಕನ್ನಡ ಸಾಹಿತ್ಯ ಲೋಕದಲ್ಲಿ ಒಬ್ಬ ಗಟ್ಟಿ ಲೇಖಕಿಯಾಗಿದ್ದಾರೆ. ಆಡು ಮುಟ್ಟದ ಸೊಪ್ಪಿಲ್ಲ ಎನ್ನುವಂತೆ ವಿಷಯ–ವಸ್ತುಗಳನ್ನು ಮುಟ್ಟಿ ಮನಮುಟ್ಟುವಂತೆ ಬರೆಯುತ್ತಾರೆ. ಈ ಅರ್ಥದಲ್ಲಿ ಅವರು ಎಲ್ಲ ಗುಂಪಿನ, ವರ್ಗದ ಚಿಂತನೆಯ ಓದುಗರನ್ನೂ ತಮ್ಮ ನಿಲುವು ಮತ್ತು ವಿಚಾರಗಳನ್ನು ತಲುಪಿಸುತ್ತಿದ್ದಾರೆ. ವೈದ್ಯೆ, ಲೇಖಕಿ, ಸಂಸ್ಕೃತಿಕ ಚಿಂತಕರು, ಅನುವಾದಕರು ಮತ್ತು ಮಹಿಳಾ ಸಂಘಟಕರಾಗಿ ಹಲವು ನೆಲೆಗಳಿಂದ ಅವರು ಸಾಹಿತ್ಯ ಮತ್ತು ಸಾಮಾಜಿಕ ವಲಯಗಳಲ್ಲಿ ತಮ್ಮನ್ನು ತೊಡಗಿಸಿ ಕೊಂಡಿದ್ದಾರೆ.

ವೈದ್ಯೆರಾಗಿ ತಮ್ಮ ಬಳಿಗೆ ಬಂದ ರೋಗಿಗಳ ಕಾಯಿಲೆಗಳನ್ನು ಗುಣಪಡಿಸುತ್ತ, ಜೊತೆಗೆ ಸಮಕಾಲಿನ ಸಮಾಜದ ಕಾಯಿಲೆಗಳನ್ನು ಗುರುತಿಸುವ, ಅವುಗಳ ಕಾರಣಗಳನ್ನು ಶೋಧಿಸುವ ಹಾಗೂ ಪರಿಹಾರಗಳನ್ನು ಹುಡುಕುವ ಪ್ರಯತ್ನವಾಗಿ ಅವರ ಬರಹಗಳು ಹಾಗೂ ಕಾರ್ಯಯೋಜನೆಗಳು ಸಾಕಾರಗೊಂಡಿವೆ. ಅನುಪಮಾ ಅವರು ಒಳ್ಳೆಯ ವಾಗ್ಮಿ ಯಾಗಿದ್ದಾರೆ ಎಂತಹ ಗಹನ ವಿಚಾರಗಳನ್ನು ಸರಳವಾಗಿ ಮತ್ತು ನೇರವಾಗಿ ಎಲ್ಲರಿಗೂ ಮುಟ್ಟಿಸಬಲ್ಲರು. ಆವೇಶ, ಆಕ್ರೋಶಗಳಿಗೆ ಅವರಲ್ಲಿ ಎಡೆಯಿಲ್ಲ. ಕಾಣುವ ಹಿಂಸೆಗಳ ಕುರಿತು ಮಾತ ನಾಡುವಂತೆಯೇ ಸಮಾಜದಲ್ಲಿ ಮಹಿಳೆಯರ ಮೇಲೆ ನಿರಂತರ ನಡೆಯುತ್ತಿರುವ ಕಾಣದ ಹಿಂಸೆಯ ಕುರಿತು ಮಾತನಾಡುವಂತಾಗಬೇಕು ಎಂಬ ಕಳಕಳಿ ಅವರದು.

೨೦೧೩ ರಲ್ಲಿ ಮಂಗಳೂರು ವಿಶ್ವವಿದ್ಯಾನಿಲಯದ ಮಹಿಳಾ ಅಧ್ಯಯನ ಕೇಂದ್ರವು ಅಂತಾರಾಷ್ಟ್ರೀಯ ಮಹಿಳಾ ದಿನಾಚರಣೆಯ ಪ್ರಯುಕ್ತ ಮಹಿಳೆಯರ ಮೇಲಿನ ದೌರ್ಜನ್ಯ ಕಾರಣಗಳು ಮತ್ತು ಆಯಾಮಗಳು ಎಂಬ ವಿಚಾರ ಸಂಕಿರಣವನ್ನು ಆಯೋಜಿಸಿತ್ತು. ಅನುಪಮಾ ಅದರ ಸಮಾರೋಪ ಭಾಷಣಕಾರರಾಗಿ ಮಾತನಾಡುತ್ತ, ಮಹಿಳೆಯರ ಮೇಲೆ ನಡೆಯುತ್ತಿರುವ ಕಾಣದ ಹಿಂಸೆಗಳನ್ನು ವಿಸ್ತೃತವಾಗಿ ಚರ್ಚಿಸಿದರು.

ತಣ್ಣನೆಯ ಬಂಡಾಯಕ್ಕೆ ಇನ್ನೊಂದು ಹೆಸರು ಅನುಪಮಾ ಅವರದು. ಕಳೆದ ಕೆಲವು ವರ್ಷಗಳಿಂದ ಕರ್ನಾಟಕದ ಸಾಹಿತ್ಯಿಕ ಮತ್ತು ಸಾಂಸ್ಕೃತಿಕ ಜಿಜ್ಞಾಸೆಗಳ ಸಂದರ್ಭಗಳಲ್ಲಿ ಅನುಪಮಾ ಅವರು ತುಂಬಾ ಚುರುಕಾಗಿ, ತೀಕ್ಷಣವಾಗಿ ಮತ್ತು ಸ್ಪಷ್ಟವಾಗಿ ತಮ್ಮ ನಿಲುವುಗಳನ್ನು ಪ್ರಕಟಿಸುತ್ತ ಬಂದು ವೈಚಾರಿಕ ಚರ್ಚೆಗೆ ಕಾರಣಕರ್ತರಾಗಿದ್ದಾರೆ. ೨೦೧೧ ರಲ್ಲಿ ಧಾರವಾಡದಲ್ಲಿ ಪ್ರೊ. ಗಿರಡ್ಡಿ ಗೋವಿಂದ ರಾಜರ ನೇತೃತ್ವದಲ್ಲಿ. 'ಧಾರವಾಡ ಸಾಹಿತ್ಯ ಸಂಭ್ರಮ' ಎಂಬ ಸಾಹಿತಿಗಳ ಅದ್ದೂರಿ ಸಮಾವೇಶ

ಆಯೋಜನೆಗೊಂಡಿತ್ತು. ಆರೊವರೆ ಕೋಟಿ ಕನ್ನಡಿಗರಲ್ಲಿ ೪೦೦ ಜನರಿಗಷ್ಟೇ ಅಲ್ಲ ಪ್ರವೇಶಾವಕಾಶವಿತ್ತು ಪಾಲ್ಗೊಳ್ಳುವವರು ನಿಗದಿತ ಶುಲ್ಕವನ್ನು ತೆರುವುದೂ ಕಡ್ಡಾಯವೆನಿಸಿತ್ತು. ಇದನ್ನು ಪ್ರಗತಿಪರ ಗೆಳೆಯರ ಬಳಗ ತುಂಬ ಸಕಾಲಿಕವಾಗಿ ಪ್ರತಿಭಟಿಸಿದ ಪರಿಣಾಮವಾಗಿ ಸಾಹಿತ್ಯಿಕ ವಾಗ್ವಾದವೊಂದು ಏರ್ಪಟಿತ್ತು. ಸಾಹಿತ್ಯ ಸಂಭ್ರಮದಲ್ಲಿ ಪಾಲ್ಗೊಳ್ಳುವವರಿಗೆ ನಿಗದಿಯಾಗಿದ್ದ ಶುಲ್ಕ ವಿನಾಯಿತಿಯೂ ದೊರೆಯಿತು. ಸಾಹಿತ್ಯ ಸಂಭ್ರಮವನ್ನು ಪ್ರಶ್ನಿಸಿ, ವಿರೋಧಿಸಿ ಕರ್ನಾಟಕ ಜನ ಸಾಹಿತ್ಯ ಸಮಾವೇಶ ಎಂಬ ಸಮ್ಮೇಳನವನ್ನು ಪ್ರಗತಿ ಪರರೆಲ್ಲ ಸೇರಿ ಆಯೋಜಿಸಿದ್ದರು ಇದರಲ್ಲಿ ಅನುಪಮಾ ಅವರ ಪಾತ್ರ ಪ್ರಮುಖವಾದುದು.

ಮೈಸೂರಿನಲ್ಲಿ ಪ್ರತಿವರ್ಷ ನಡೆಯುವಂತೆ ೨೦೧೨ ರಲ್ಲಿ ದಸರಾ ಉತ್ಸವ ಆಯೋಜನೆಗೊಂಡಿತ್ತು. ದಸರಾ ಪೂರ್ವದಲ್ಲಿ ಅಂಬಾರಿಯನ್ನು ಹೊರುವ ಆನೆಯ ಬೆನ್ನಿಗೆ ವಿಶೇಷ ಹಾಸಿಗೆ ಹೊಲಿದು ಕೊಡುವ ಅಕ್ರಂ ಪಾಷಾನ ಬಗೆಗೆ ಕೋಮುವಾದಿ ಗುಂಪೊಂದು ವಿವಾದವನ್ನು ಹುಟ್ಟುಹಾಕಿತ್ತು ಈ ಪ್ರಕರಣದ ಹಿನ್ನಲೆಯಲ್ಲಿ ಅನುಪಮಾ ಪ್ರಜಾಪ್ರಭುತ್ವದಲ್ಲಿ ರಾಜಸ್ವದ ದಟ್ಟ ಕುರುಹುಗಳಿರುವ ದಸರಾ ಆಚರಣೆ ಹೇಗೆ ಅಸಂಬದ್ಧ ಎಂಬುದರ ಕುರಿತು ಸಭೆಗಳಲ್ಲಿ ಮಾತನಾಡಿದರು ಮತ್ತು ಪತ್ರಿಕೆಯಲ್ಲಿ ಬರೆದರು ಅವರು ಲೇಖನದಲ್ಲಿ ವನ್ಯಜೀವಿ ಕಾಯ್ದೆಯನ್ವಯ ಕರಡಿ ಸಾಕುವುದು ಅಪರಾಧವಾದರೆ, ಸಾವಿರ ಕೆ.ಜಿ. ತೂಗುವ ಅಂಬಾರಿಯನ್ನು ಆನೆಯ ಮೇಲೆ ಹೊರಿಸುವುದು ಯಾಕೆ ಅಪರಾಧವಲ್ಲ ಪ್ರಶ್ನಿಸಿದರು.

ಕಲಾವಿದರು ಮತ್ತು ಸಾಹಿತಿಳಿಗೆ ನೀಡುವ ಸಂಭಾವನೆಯಲ್ಲಿನ ತಾರತಮ್ಯ ನೀತಿಯನ್ನು ಪ್ರಶ್ನಿಸುತ್ತ ಆ ನೀತಿಯನ್ನು ಸಮರ್ಥಿಸಿ ಎಡಬಿಡಂಗಿತನ ಮೆರೆದ ಎಡಪಂಥೀಯ ಚಿಂತಕರೊಬ್ಬರನ್ನು ಸ್ಪಷ್ಟ ಮಾತುಗಳಲ್ಲಿ ಖಂಡಿಸಿದರು. ಎಂದರೆ ತಪ್ಪನ್ನು ಅದು ಯಾರದೇ ಆಗಿರಲಿ–ತಪ್ಪೆಂದು ಹೇಳಲು ತೋರಿಸಲು ಅಳುಕಬೇಕಿಲ್ಲ ಎಂಬುದು ಅನುಪಮಾ ಅವರ ವ್ಯಕ್ತಿತ್ವದಲ್ಲಿ ಕಂಡುಬರುವ ವಿಶಿಷ್ಟಗುಣ.

೨೦೧೨ ರಲ್ಲಿ ಮೂಡಬಿದರೆಯಲ್ಲಿ 'ನುಡಿಸಿರಿ' ಎಂಬ ಅದ್ದೂರಿ ಸಾಹಿತ್ಯ ಸಮ್ಮೇಳನದ ದಶಮಾನೋತ್ಸವ ಆಯೋಜನೆ ಗೊಂಡಿತ್ತು. ಅದ್ದೂರಿತನದ ಸಮ್ಮೇಳನಗಳ ಬಗ್ಗೆ ಮೊದಲೇ ಇದ್ದ ಪ್ರಗತಿಪರರ ವಿರೋಧವು ಆ ಸಮ್ಮೇಳನದ ಉದ್ಘಾಟನೆಯನ್ನು ಸೌಜನ್ಯ ಎಂಬ ಮುಗ್ಧ ಯುವತಿಯ ಅತ್ಯಾಚಾರ ಪ್ರಕರಣದ ಕುರಿತು ಚಕಾರ ಎತ್ತದ, ಅತ್ಯಾಚಾರ ಆರೋಪ ಹೊತ್ತವರ ರಕ್ಷಣೆಗೆ ನಿಂತ ಧರ್ಮಸ್ಥಳದ ಧರ್ಮಾಧಕಾರಿಯಿಂದ ನಡೆಸುವುದು ತಿಳಿದಾಗ ಉಲ್ಬಣಗೊಂಡಿತು. 'ನುಡಿಸಿರಿ' ಸಾಹಿತ್ಯ ಸಮ್ಮೇಳನವನ್ನು ವಿರೋಧಿಸಿ 'ಜನನುಡಿ' ಎಂಬ ಮಾದರಿ ಸಾಹಿತ್ಯ ಸಮ್ಮೇಳನದ ಕನಸನ್ನು ಹಲವರಲ್ಲಿ ಬಿತ್ತಿ ಅದು ಕಾರ್ಯರೂಪಕ್ಕೆ ಬರುವಂತೆ ಮಾಡಿದವರಲ್ಲಿ ಅನುಪಮಾ ಅವರ ಪಾತ್ರ ಹಿರಿದಾಗಿದೆ.

ಕರಾವಳಿಯಲ್ಲಿ ಜನರು ಮೂಗುಬ್ಬಸ ಪಡುವಂತೆ ವ್ಯಾಪಿಸಿದ್ದ ಕೋಮುವಾದಿ ಹಿಂಸಾಕೃತ್ಯಗಳು ಹಾಗೂ ದೇಶದೆಲ್ಲೆಡೆ ನಡೆಯುತ್ತಿದ್ದ ಮಹಿಳೆಯರ ಮೇಲಿನ ಲೈಂಗಿಕ ದೌರ್ಜನ್ಯ ಪ್ರಕರಣಗಳಿಂದ ಬೇಸತ್ತ ಮಂಗಳೂರಿನ ಹತ್ತು ಹಲವು ಮಹಿಳಾಪರ ಸಂಘಟನೆಗಳ ಪದಾಧಿಕಾರಿಗಳು ಮತ್ತು ಸದಸ್ಯರು ೨೦೧೨ರ ಕೊನೆಯಲ್ಲಿ 'ಮಹಿಳಾ ದೌರ್ಜನ್ಯ ವಿರೋಧಿ ವೇದಿಕೆ' ಯನ್ನು ಹುಟ್ಟುಹಾಕಿದರು ಅದರ ಆಶ್ರಯದಲ್ಲಿ ೨೦೧೩ರ ಮಾರ್ಚನಲ್ಲಿ ಅಂತಾರಾಷ್ಟ್ರೀಯ ಮಹಿಳಾ ದಿನಾಚರಣೆಯನ್ನು ಕರ್ನಾಟಕದ ಅನೇಕ ಪ್ರಗತಿಪರರ ಸಂಘಟನೆಗಳ ಸಹಭಾಗಿತ್ವದಲ್ಲಿ ಆಯೋಜಿಸಲಾಗಿತ್ತು. ಕರಾವಳಿಯ ಇನ್ನೊಂದು ತುದಿಯಲ್ಲಿ ನೆಲೆಸಿರುವ ಅನುಪಮಾ ಅವರು ಈ ವೇದಿಕೆಯಲ್ಲಿ ತಮ್ಮನ್ನು ಗುರುತಿಸಿ ಕೊಂಡುದಲ್ಲದೆ, ಸಮಾವೇಶದ ಬಳಿಕ ಕರ್ನಾಟಕ ಮಹಿಳಾ ದೌರ್ಜನ್ಯ ವಿರೋಧಿ ಒಕ್ಕೂಟ' ಸ್ಥಾಪನೆಯ ರೂಪು ರೇಷಯನ್ನು ಸಿದ್ಧಪಡಿಸುವಲ್ಲಿ ಗಮನಾರ್ಹ ಪಾತ್ರ ವಹಿಸಿದರು. ಈ ಒಕ್ಕೂಟದ ವತಿಯಿಂದ ೨೦೧೪ ರಲ್ಲಿ ಮೈಸೂರಿನಲ್ಲಿ ಅಂತಾರಾಷ್ಟ್ರೀಯ ಮಹಿಳಾ ದಿನಾಚರಣೆಯನ್ನು ಆಯೋಜಿಸಿದ ಸಂದರ್ಭದಲ್ಲೂ ಅನುಪಮಾ ಅವರು ಪಾಲಗೊಂಡರು.

೨೦೧೩ ರಲ್ಲಿ ಕರ್ನಾಟಕದಲ್ಲಿ ಬಿ.ಜೆ.ಪಿ. ಸರಕಾರ ಹೋಗಿ ಕಾಂಗ್ರೆಸ್ ಸರಕಾರ ಅಧಿಕಾರಕ್ಕೆ ಬಂದಾಗ, ಸರಕಾರವು ಮಹಿಳಾಪರವಾಗಿ ಕೆಲಸಮಾಡಲು ಇರುವ ತುರ್ತು ವಿಷಯಗಳ ಕುರಿತು ಅನುಪಮಾ ಅವರು ಕರ್ನಾಟಕ ಮಹಿಳಾ ದೌರ್ಜನ್ಯ ವಿರೋಧಿ ಒಕ್ಕೂಟದ ವತಿಯಿಂದ ಮುಖ್ಯಮಂತ್ರಿಗಳಿಗೆ ಬಹಿರಂಗ ಪತ್ರವನ್ನು ಪತ್ರಿಕೆಗಳಲ್ಲಿ ಬರೆದು ಒಂದು ಸಂಚಲನವನ್ನು ಮೂಡಿಸಿದರು. ಅಷ್ಟೇ ಅಲ್ಲ, ಅದೇ ವರ್ಷ ಮಡಿಕೇರಿಯಲ್ಲಿ ಅಖಿಲ ಭಾರತ ಸಾಹಿತ್ಯ ಸಮ್ಮೇಳನ ಜರುಗಿದಾಗ, ಅಲ್ಲಿ ಸೊರಗಿದ ಮಹಿಳಾ ಪ್ರಾತಿನಿಧ್ಯದ ಕುರಿತು ಒಕ್ಕೂಟದ ಪರವಾಗಿ ಅಸಮಾಧಾನದ ದನಿ ಎತ್ತಿದರು. ೨೦೧೯ರಲ್ಲಿ ನಡೆದ ೮೪ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದ 'ಕುಂಭ ಮೆರವಣಿಗೆ' ವಿರೋಧಿಸಿ ಕಪ್ಪು ಸೀರೆ, ಕೆಂಪು ರವಿಕೆ ತೊಟ್ಟು ನಾವು ಹೋರಾಟಕ್ಕೆ ಸಜ್ಜಾಗಿದ್ದೇವೆ ಎಂದು ಸಮ್ಮೇಳನಾಧ್ಯಕ್ಷರ ಮೌನವನ್ನು ಅವರ ಸಮ್ಮುಖದಲ್ಲೇ ಖಂಡಿಸಿದರು. ಇವರೇ ಸ್ವತ: ತಾವು ಓರ್ವ ಸಂಪನ್ಮೂಲ ವ್ಯಕ್ತಿಯಾಗಿ ಭಾಗವಹಿಸುತ್ತಿದ್ದ ಕಾರ್ಯಕ್ರಮದ ಆಯೋಜಕರ ಮಿತಿಗಳನ್ನು ಪ್ರಶ್ನಿಸುವ ಛಾತಿ ಅನುಪಮಾ ಅವರ ವ್ಯಕ್ತಿತ್ವದ ವೈಶಿಷ್ಟ್ಯ.

ಕರ್ನಾಟಕದ ಬಹುತೇಕ ಎಲ್ಲ ಪ್ರಗತಿಪರ ಸಂಘಟನೆಗಳೊಂದಿಗೆ ಗುರುತಿಸಿ ಕೊಂಡಿರುವ, ಅವರ ಕಾರ್ಯಗಳಲ್ಲಿ ತಾನೂ ಕೈಜೋಡಿಸುವ ಮೂಲಕ ಹಾಗೂ 'ಮಂಥನ; ಸಾಹಿತ್ಯಿಕ–ಸಾಂಸ್ಕೃತಿಕ ವೇದಿಕೆ' ಹಾಗೂ 'ಕಾವ್ಯಬೋಧಿ' ಎಂಬ ತಿಂಗಳ ಕಾರ್ಯಕ್ರಮವನ್ನು ನಡೆಸುವ ಮೂಲಕ ತಮ್ಮ ಸಾಮಾಜಿಕ ಮತ್ತು ಮಹಿಳಾಪರ ಕಾಳಜಿಗಳನ್ನು ಹಾಗೂ ಬದ್ದತೆಗಳನ್ನು ಮೆರೆದಿದ್ದಾರೆ. ಅವರ ದಿಟ್ಟತನದ ಹೋರಾಟ, ಪ್ರತಿಭಟನಾ ಚಿಂತನೆ ಮತ್ತು ಕನ್ನಡ ಸಾಹಿತ್ಯ ಬರವಣಿಗೆಗಳು ನಮ್ಮ ಸಮಾಜಕ್ಕೆ ದಾರಿದೀಪ ವಾಗಿವೆ

ಆಕಾರ ಗ್ರಂಥಗಳು:

೧. ಎಚ್. ಎಸ್. ಅನುಪಮಾ – ಡಾ. ಸಬೀಹಾ ಭೂಮಿಗೌಡ.

೨. ಹೆಣ್ಣು ಸಂಕರ ಕಾಲದ ಆತ್ಮಪ್ರಜ್ಞೆ – ಡಾ. ಎಚ್. ಎಸ್. ಅನುಪಮಾ

೩. ಅಭಿವ್ಯಕ್ತಿ ಸ್ವಾತಂತ್ರ್ಯ ವಿವಿಧ ಆಯಾಮಗಳು – ಸಂಪಾದನೆ ಡಾ. ಎಚ್. ಎಸ್. ಅನುಪಮಾ ಬಸೂ